ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ ಕಾರ್ಯಾಲಯ, ಬೆಳಗಾವಿ-590-002
ದೂರವಾಣಿ ಸಂಖ್ಯೆ: 0831-2407201 E-mail: ceo_zp_bgm@nic.in

ಕ್ರ.ಜಿಪಂ/ರಾಗ್ರಾಉ/ವಿವ- 47/2020-21 ದಿನಾಂಕ: 05-01-2021

**: ಪ್ರಕಟಣೆ :**

ವಿಷಯ: ದಿನಾಂಕ: 19-09-2020 ರಂದು ತಾಲೂಕಾ IEC ಸಂಯೋಜಕರುಗಳ ಹುದ್ದೆಗೆ ಅರ್ಜಿ ಆಹ್ವಾನಿಸಲಾದ ಪ್ರಕಟಣೆ ಹಾಗೂ ಎಲ್ಲ ಪ್ರಕ್ರಿಯೆಗಳನ್ನು ರದ್ದುಗೊಳಿಸುವ ಕುರಿತು.

ಉಲ್ಲೇಖ:1) ಆಯುಕ್ತಾಲಯದ ಪತ್ರ ಸಂಖ್ಯೆ. ಗ್ರಾಅಪ(2)(3) ಉಖಾಯೋ.2012 ದಿನಾಂಕ: 30-11-2015 & 31-05-2016
2) ಈ ಕಾರ್ಯಾಲಯದ ಪತ್ರ ಸಮಸಂಖ್ಯೆ ದಿನಾಂಕ: 18-09-2020, 07-10-2020
3) M K Belavadi ಹೊರಗುತ್ತಿಗೆ ಸಂಸ್ಥೆಯವರ ಪತ್ರ ದಿ: 20-11-2020

$$$

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (2) ರ ಪತ್ರ ದಿನಾಂಕ:18-09-2020 ರಡಿ ಖಾಲಿ ಇರುವ ತಾಲೂಕಾ IEC ಸಂಯೋಜಕರುಗಳ ಹುದ್ದೆಗಳನ್ನು ನಿಯಮಾನುಸಾರ ಭರಣಾ ಮಾಡಲು ಮಾನವ ಸಂಪನ್ಮೂಲ ಸಂಸ್ಥೆಗೆ ತಿಳಿಸಲಾಗಿತ್ತು. ಅದರಂತೆ ಮಾನವ ಸಂಪನ್ಮೂಲ ಸಂಸ್ಥೆಯವರಾದ ಎಂ ಕೆ ಬೆಳವಡಿ ರವರು ದಿನಾಂಕ: 19-09-2020 ರಡಿ ನಿಯಮಾನುಸಾರ ದಿನಪತ್ರಿಕೆಯಲ್ಲಿ ಪ್ರಕಟಣೆ ಹೊರಡಿಸಿದರು. ಉಲ್ಲೇಖ (2) ರ ದಿನಾಂಕ: 07-10-2020 ರಡಿ ದಾಖಲಾತಿ ಪರಿಶೀಲನೆ ಜರುಗಿಸಲು ಈ ಕಾರ್ಯಾಲಯದಿಂದ ಮಾನವ ಸಂಪನ್ಮೂಲ ಸಂಸ್ಥೆಗೆ ಸೂಚಿಸಲಾಯಿತು. ಅದರಂತೆ ದಿನಾಂಕ: 29-10-2020 ರಂದು IEC ಸಂಯೋಜಕರುಗಳ ಹುದ್ದೆಗಳಿಗೆ ಅರ್ಜಿ ಸಲ್ಲಿಸಿರುವ ಎಲ್ಲ ಅಭ್ಯರ್ಥಿಗಳ ದಾಖಲಾತಿಗಳ ಪರಿಶೀಲನೆಯನ್ನು ಜಿಲ್ಲಾ ಪಂಚಾಯತ ಕಾರ್ಯಾಲಯದಲ್ಲಿ ಜರುಗಿಸಿ ಅರ್ಹ ಅಭ್ಯರ್ಥಿಗಳ ಪಟ್ಟಿಯನ್ನು ಸಲ್ಲಿಸಿದ್ದರು.

ಉಲ್ಲೇಖ (3) ರ ಪ್ರಕಾರ ಮಾನವ ಸಂಪನ್ಮೂಲ ಸಂಸ್ಥೆಯವರಾದ ಎಂ ಕೆ ಬೆಳವಡಿ ರವರು ಜೇಷ್ಠತಾ ಪಟ್ಟಿ ಹೊರಡಿಸಿ, ಸದರಿ ಪಟ್ಟಿಗೆ ಆಕ್ಷೇಪಣೆ ಇದ್ದಲ್ಲಿ 7 ದಿನಗಳೊಳಗಾಗಿ ಆಕ್ಷೇಪಣೆ ಸಲ್ಲಿಸಲು ತಿಳಿಸಿದರು. ಅದರಂತೆ 6 ಜನ ಅಭ್ಯರ್ಥಿಗಳು ತಮ್ಮ ಆಕ್ಷೇಪಣೆಗಳನ್ನು ಸಲ್ಲಿಸಿದ್ದರು. ಸದರಿ ಆಕ್ಷೇಪಣೆಗಳನ್ನು ದಿನಾಂಕ: 04-12-2020 ರಂದು ಆಕ್ಷೇಪಣೆ ಅರ್ಜಿಗಳನ್ನು ಸಲ್ಲಿಸಿದ ಅಭ್ಯರ್ಥಿಗಳ ಸಮಕ್ಷಮ ಸಭೆ ಜರುಗಿಸಲಾಯಿತು.

**ಮೇಲಿನ ಎಲ್ಲ ಅಂಶಗಳನ್ನು ಪರಿಶೀಲಿಸಲಾಗಿ, ಕೆಲವು ತಾಂತ್ರಿಕ ತೊಂದರೆಗಳಿರುವದು ಕಂಡು ಬಂದಿರುವದರಿಂದ ದಿನಾಂಕ: 19-09-2020 ರಂದು ತಾಲೂಕಾ IEC ಸಂಯೋಜಕರುಗಳ ಹುದ್ದೆಗೆ ಅರ್ಜಿ ಆಹ್ವಾನಿಸಲಾದ ಪ್ರಕಟಣೆ ಹಾಗೂ ಮೇಲಿನ ಎಲ್ಲ ಪ್ರಕ್ರಿಯೆಗಳನ್ನು ರದ್ದುಗೊಳಿಸಲಾಗಿದೆ.**

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು,
ಜಿಲ್ಲಾ ಪಂಚಾಯತ ಬೆಳಗಾವಿ